ನೇಮಕವಾಗಬೇಕೆಂಬುದು ಅವನ ಉದ್ದೇಶವಾಗಿತ್ತು. 'ಆದಷ್ಟು ಬೇಗ ನನ್ಗೆ ಮನೆಗೆ ಸಹಾಯಕಿ ಬೇಕು. ಸ್ವಲ್ಪ ನಡುವಯಸ್ಸಿನವರಾಗಿದ್ದು, ತಾಯಿ ಮಗುವನ್ನು ನೋಡಿಕೊಳ್ಳುವವರು ಬೇಕು. ಇದು ತೀರಾ ಅರ್ಜೆಂಟ್. ಇವತ್ತೇ ಸಿಕ್ಕಿದರೆ ಇನ್ನೂ ಒಳ್ಳೇದು. ನಿನಗೆ ಇದರ ಅರ್ಜೆನ್ಸಿ ಅರ್ಥವಾಗುತ್ತೆ ಅಂದುಕೊಳ್ಳುತ್ತೇನೆ' ಎಂದು ಆಗ್ರಹಿಸಿದ.

ಅವನ ಉದ್ವೇಗ ಅರ್ಥ ಮಾಡಿಕೊಂಡ ಅಂಕಿತಾ, 'ಆಗಲಿ ಸರ್' ಎಂದು ನಮ್ರತೆಯಿಂದ ಉತ್ತರಿಸಿದಳಾದರೂ ಅದು ಅಷ್ಟು ಸುಲಭಕ್ಕೆ ಇವರ ಮನೆಯಿದ್ದ ಜಾಗಕ್ಕೆ ಬಂದು ನೌಕರಿ ಮಾಡಿಕೊಂಡು ಹೋಗುವ ಸಹಾಯಕಿ, ಸುಲಭಕ್ಕೆ ದೊರಕುವಂತಿರಲಿಲ್ಲ. ಆಕೆ ಕಡೆಗೆ ಯಾವುದೋ ಏಜೆನ್ಸಿಯನ್ನು ಸಂಪರ್ಕಿಸಿ ಹೋಮ್ ನರ್ಸ್ ಬೇಕೆಂದು ತಿಳಿಸಿ, ಕಡೆಗೆ ಅಂಕಿತಾಳೇ ಖುದ್ದು ಹೋಗಿ ಆ ಏಜೆನ್ಸಿಯವರ ಕಚೇರಿಯಲ್ಲಿ ಕುಳಿತು ಅಭ್ಯರ್ಥಿಗಳನ್ನು ಶಾರ್ಟ್ ಲಿಸ್ಟ್ ಮಾಡಿದಳು. ಪ್ರದೀಪ ಹೇಳಿದಂತೆ ನಡುವಯಸ್ಸಿನ ಮಹಿಳೆ ಒಬ್ಬರೂ ಇರಲಿಲ್ಲ. ಎಲ್ಲರೂ ಸಣ್ಣ ಪ್ರಾಯದ, ಅವಿವಾಹಿತ ಹೆಣ್ಣುಮಕ್ಕಳು. ಅಂಥವರನ್ನು ತಾನು ಪ್ರದೀಪ ಹೇಳಿದ ಬಳಿಕವೂ ಆಯ್ಕೆ ಮಾಡುವಂತಿರಲಿಲ್ಲ. ಈ ನಡುವೆ ಪ್ರದೀಪ ನಾಲ್ಕಾರು ಬಾರಿ ಫೋನ್ ಮಾಡಿ, 'ಯಾರಾದರೂ ಸಿಕ್ಕಿದ್ರಾ...?' ಎಂದು ಪ್ರಶ್ನಿಸಿದಾಗ ಅವನಿಗೆ ಅದರ ಅವಸರ ಎಷ್ಟಿದೆ ಎಂದು ಅವಳು ಅರ್ಥ ಮಾಡಿಕೊಂಡಿದ್ದಳು.

ಇದರ ನಡುವೆ, ಪ್ರದೀಪ ತನ್ನ ಕಚೇರಿಗೆ ಸಿಸಿಟಿವಿ ಅಳವಡಿಸಿದ ಸಂಸ್ಥೆಗೆ ಕರೆ ಮಾಡಿ ಮನೆಯ ಹಾಲ್ ಮತ್ತು ಬೆಡ್ ರೂಮಿಗೆ ಸಿಸಿಟಿವಿ ಅಳವಡಿಸಲು ಆದೇಶಿಸಿದ್ದ. ನಿವೇದಿತಾ ಹೆಚ್ಚು ಸಮಯ ಕಳೆಯುವ ಕಡೆಗೆ ಸಿಸಿಟಿವಿ ಅಳವಡಿಸಿ, ಅದರ ಚಿತ್ರಣವನ್ನು ಎಲ್ಲಿ ಹೋದರೂ ತಾನು ತನ್ನ ಮೊಬೈಲ್‌ನಲ್ಲಿ ವೀಕ್ಷಿಸುವಂತೆ ಅಳವಡಿಸಿಕೊಂಡ. ತಾನು ದೂರವಿದ್ದ ಸಂದರ್ಭಗಳಲ್ಲಿ, ನಿವಿ ಏನಾದರೂ ಹೆಚ್ಚು ಕಮ್ಮಿ ಮಾಡಿದರೆ ಸ್ಥಳಕ್ಕೆ ತಲುಪಲು ಅಸಾಧ್ಯವಾಗಿ ಹೋಗುವ ಅಪಾಯವೇ ಹೆಚ್ಚಾಗಿರುವ ಕಾರಣ ಒಬ್ಬ ಸಹಾಯಕಿಯ ಕಣ್ಗಾವಲು ಸದಾ ಅವಳ ಮೇಲಿರಲಿ ಎನ್ನುವುದು ಅವನ ಉದ್ದೇಶವಾಗಿತ್ತು. ನಿವೇದಿತಾಳಿಗೆ ಇದು ತಿಳಿಯಬಾರದೆನ್ನುವ ಉದ್ದೇಶಕ್ಕೆ ಅವುಗಳ ಕ್ಯಾಮೆರಾಗಳನ್ನು ಗುಪ್ತವಾಗಿ ಮರೆಮಾಚುವಂತೆ ಅಳವಡಿಸಿದ್ದ. ಅವನಿಗಷ್ಟೇ ಅವುಗಳಿರುವ ಸ್ಥಳ ತಿಳಿದಿತ್ತು. ಅಂಕಿತಾ ನಿವೇದಿತಾಳಿಗೆ ಸಹಾಯಕಿಯನ್ನು ಆಯ್ಕೆ ಮಾಡುವ ಮುನ್ನವೇ ನಿವಿ ಮರುದಿನ ಮನೆಗೆ ಮರಳಿದಳು. ಇದರ ಸುಳಿವೇ ಇರದ ಪ್ರದೀಪನಿಗೆ, ರಾತ್ರಿ ಮನೆಗೆ ಮರಳಿದಾಗ ನಿವಿ ತನಗೆ ಹೇಳದೇ ಆಗಮಿಸಿದ್ದನ್ನು ಕಂಡು ಅವನಿಗೆ ಅಚ್ಚರಿಯೂ, ಆಘಾತವೂ ಆಗಿತ್ತು.

'ನೀನೇನು ಒಂದು ಮಾತು ತಿಳಿಸದೇ ಬಂದು ಬಿಟ್ಟೇ...?' ಎಂದ ಪೆಚ್ಚಾಗಿ ನಗುತ್ತಾ.

'ಯಾಕೆ ಬರಬಾರದಿತ್ತೇನು? ಬಂದದ್ದು ನಿಮಗೆ ತೊಂದರೆ ಆಯಿತೇನು? ಇದು ನನ್ನ ಮನೆ. ಹೇಳಿ ಬರುವ ಔಪಚಾರಿಕತೆಯ ಅಗತ್ಯ ಇದೆಯೇ?' ಎಂದು ಪ್ರಶ್ನೆಯ ಮೂಲಕ ತಿವಿದಳು. ಅವಳ ಅಸಮಾಧಾನ ಹೊರಗೆ ತುಳುಕದಂತೆ ಅವಳು ಅದುಮಿರಿಸಿದರೂ, ಅದರ ಮೊನಚು ಅವನಿಗೆ ತಗುಲಿತು.

ಅವನು ಅವಳ ಮಾತಿಗೆ ಉತ್ತರಿಸುವ ಗೊಡವೆಗೆ ಹೋಗದೇ ತನ್ನ ಕಂಡು ಸಂತುಷ್ಟಳಾಗಿ ಕೈ ಕಾಲು ಬಡಿದು ಬೊಚ್ಚು ಬಾಯಗಲಿಸಿ ಏನೋ ಹೇಳಲೆತ್ನಿಸುತ್ತ, ತನ್ನ ಸೆಳೆಯುವ ಯತ್ನ ಮಾಡುತ್ತಿದ್ದ ಮಗಳತ್ತ ಬಾಗಿ ಎತ್ತಿಕೊಂಡ, 'ನಿಧಿ ಪುಟ್ಟಿ... ಹೇಗಿದ್ದೀ...? ಅಪ್ಪನನ್ನು ಮರೆತಿಲ್ಲ ತಾನೇ...?'

'ಮರೆಯಬಾರದೆಂಬ ಕಾರಣಕ್ಕೇ ಬಂದಿದ್ದು ಅಂತ ಹೇಳು ನಿಧಿ'. ನಿವೇದಿತಾಳ ಬಾಯಿಂದ ಸಿಡಿಗುಂಡಿನಂತೆ ವ್ಯಂಗ್ಯ ತೂರಿ ಬಂದಿತು. ಅವಳ ಮಾತಿನ ತೀಕ್ಷ್ಣತೆ ತನಗೆ ತಗುಲಿಲ್ಲವೆಂಬಂತೆ ಪ್ರದೀಪ ನಿಧಿಯನ್ನೆತ್ತಿಕೊಂಡು ಹೊರಗೆ ನಡೆಯಲುಪಕ್ರಮಿಸಿದಾಗ, ತನ್ನನ್ನು ಮಾತನಾಡಿಸುವನು, ಅಥವಾ ಓಲೈಕೆಯ ನಾಲ್ಕು ಮಾತುಗಳಾಡುವನು ಎಂಬ ನಿರೀಕ್ಷೆಯಲ್ಲಿದ್ದ ನಿವಿಗೆ ನಿರಾಸೆಯಾಗಿತ್ತು. ಅವನಿಗೆ ತಾನು ಬಂದಿದ್ದು ಇಷ್ಟವಾಗಲಿಲ್ಲವೇನೋ ಎಂದು ಬಗೆದು ದ್ರವಿಸಿ ಹೋದಳು. ಅದನ್ನು ಸಹಿಸಲಾರದವಳಂತೆ, 'ಏನು... ಮಾತನಾಡಿಸದೇ ಹಾಗೇ ಹೋಗುತ್ತಿದ್ದೀರಿ...? ನಾನು ಬಂದಿದ್ದು ಇಷ್ಟವಾಗಲಿಲ್ಲವೆಂದು ಗೊತ್ತಾಯಿತು. ಈಗೇನು ವಾಪಸ್ಸು ಹೋಗಲಾ? ನೀವೇ ಇರಿ ಇಲ್ಲಿ ಒಂಟಿಯಾಗಿ ನಿಮ್ಮಿಷ್ಟ ಬಂದಂತೆ ಇರಬಹುದು...'

ಪ್ರದೀಪ ನಿಂತಲ್ಲೇ ತಿರುಗಿ ಅವಳೆಡೆಗೆ ನೋಡುತ್ತ, 'ನೀನು ಸರಿಯಾಗಿ ಮಾತನಾಡಿದರೆ ನಾನು ಪ್ರತಿಕ್ರಿಯಿಸಬಹುದು. ನಿನ್ನ ವ್ಯಂಗ್ಯ, ಕೊಂಕು, ಅನುಮಾನಗಳಿಗೆ ನನ್ನ ಹತ್ರ ಉತ್ತರ ಇಲ್ಲ' ಎಂದ.

ತಾನೇ ಅತಿರೇಕವಾಗಿ ಆಡುತ್ತಿದ್ದೇನೆನಿಸಿ ನಿವಿ ಒಂದು ಕ್ಷಣ ಸಮಾಧಾನ ತಂದುಕೊಂಡು ಒಂದು ನೀಳವಾದ ಉಸಿರು ಹೊರದಬ್ಬಿದಳು.

'ಸರಿ, ಈಗ ಹೇಳಿ... ನನ್ನ ಯಾಕೆ ಅಮ್ಮನ ಮನೆಗೆ ಕಳಿಸಿದ್ರಿ? ನನ್ನ ಯಾಕೆ ನಿಮ್ಜೊತೆ ಕರೆ ತರಲಿಲ್ಲ? ಏನಿದೆ ನಿಮ್ಮ ಮನಸ್ಸಲ್ಲಿ? ನೀವು ಹೀಗೆ ಬದಲಾಗ್ತಿರೋದು ನೋಡಿ ನನಗೆ ಅರಗಿಸಿಕೊಳ್ಳಲು ಆಗುತ್ತಿಲ್ಲ'.

'ನನಗೂ ಅಷ್ಟೇ ನಿವಿ. ನೀನು ಹೀಗೆ ಇರಲಿಲ್ಲ. ನೀನು ಮಾಡಿದ ಕೃತ್ಯ ನೆನೆಸಿಕೊಂಡರೆ ನನ್ನ ರಕ್ತ ತಣ್ಣಗಾಗುತ್ತೆ. ನಿನಗೆ ಗೊತ್ತಿಲ್ವಾ? ಅದನ್ನು ನೋಡಿಯೂ ನಾನು ಸುಮ್ಮನಿರಬೇಕಾ?'

'ನಾನೇನು ಮಾಡಿದೆ ಅಂಥದ್ದು? ಏನೋ ಇಲ್ಲ ಸಲ್ಲದು ಊಹಿಸಿ ನನ್ನ ಮೇಲೆ ಆಪಾದನೆ ಹೊರಿಸುತ್ತಿದ್ದೀರಿ? ಅದೇನು ಅಂತ ಬಾಯಿ ಬಿಟ್ಟು ಹೇಳಿದರೆ ನಾನು ಕೇಳಿಸಿಕೊಳ್ತೀನಿ...'

ಪ್ರದೀಪ ಅವಳೆಡೆಗೆ ಕಣ್ಣು ಕೆಕ್ಕರಿಸಿ ನೋಡುತ್ತಾ, 'ನಿನ್ಗೆ ಗೊತ್ತಿಲ್ವ ನೀನು ಮಾಡಿದ್ದು?'

'ಇಲ್ಲ, ಹೇಳಿ ಅಂತಿದ್ದೀನಲ್ಲಾ?'

ಅವನು ಅಂದಿನ ಘಟನೆಯ ಕುರಿತು ಹೇಳಲು ಬಾಯ್ತೆರೆದವನು ತನ್ನನ್ನು ತಾನು ತಡೆದುಕೊಂಡ. ಕೃತ್ತಿಕಾ ಹೇಳಿದ್ದ ಮಾತು ನೆನಪಾಯಿತು. ಇವಳಿಗೆ ನಿಜಕ್ಕೂ ಮಾನಸಿಕ ಚಿಕಿತ್ಸೆಯ ಅಗತ್ಯವಿದೆಯೇ? ತನ್ನ ಕಣ್ಣೆದುರೇ ಜರುಗಿದ ಘಟನೆಯನ್ನು ಅವಳು ನಡೆದೇ ಇಲ್ಲವೆನ್ನುವಂತೆ ನಿರಾಳವಾಗಿದ್ದಾಳೆ. ತಾನೇ ಮಗುವನ್ನು ಅವಳ ಕೈಯಿಂದ ಕಿತ್ತುಕೊಂಡಿದ್ದೆ. ಆ ಕೃತ್ಯವೆಸಗಿಯೂ ಅವಳ ಮುಖದಲ್ಲಿ ಲವಲೇಶವೂ ಅಪರಾಧಿ ಮನೋಭಾವದ ಛಾಯೆಯಿಲ್ಲ. ಪಶ್ಚಾತ್ತಾಪದ ಸುಳಿವಿಲ್ಲ. ಇವಳಿಗೆ ನಿಜಕ್ಕೂ ತಾನೇನು ಮಾಡುತ್ತಿದ್ದೇನೆಂಬ ಅರಿವಿಲ್ಲವೇ? ತಾನೇ ತನ್ನ ಕಂಗಳನ್ನು ನಂಬದಿರುವಾಗ, ಇನ್ನು ಇವಳು ಮಾಡಿದ್ದನ್ನು ಹೇಳಿದರೆ ಸ್ವತಃ ಇವಳು ನಂಬುವಳೇ. ಈಗ ತಾನು ನುಡಿದರೆ ಅದು ಇನ್ನು ಎಷ್ಟು ಅತಿರೇಕಕ್ಕೆ ಇವಳು ಒಯ್ಯುವಳೋ! ತಾನೇ ತಾಳ್ಮೆ ತಂದುಕೊಳ್ಳಬೇಕು. ಹೇಗೂ ಈಗ ಸಿಸಿಟಿವಿ ಅಳವಡಿಸಿದ್ದಾಗಿದೆ. ಇದು ಚಿತ್ರೀಕರಣದ ದಾಖಲೆ ಸಹಿತ ಇವಳಿಗೆ ಇದನ್ನು ತೋರಿಸಿಯೇ ಮಾತನಾಡಬೇಕು. ಅದುವರೆಗೂ ಮೌನವೇ ತನಗೆ ಕ್ಷೇಮ ಎಂದುಕೊಂಡು ಪ್ರದೀಪ ಸಂಯಮ ಧರಿಸಿಕೊಂಡ.

'ಹೇಳಿ, ಯಾಕೆ ಏನೂ ಹೇಳುತ್ತಿಲ್ಲ ಅಥವಾ ಹೇಳಲು ಏನೂ ಇಲ್ಲವೇ? ನಾನೂ ನೋಡುತ್ತಿದ್ದೇನೆ. ಪ್ರದೀಪ್, ಈಗ ನೀವು ಮುಂಚಿನಂತಿಲ್ಲ. ನೀವು ನನ್ನನ್ನು ಅಲಕ್ಷ್ಯ ಮಾಡುತ್ತಿದ್ದೀರಿ. ನಿಧಿ ಬಂದ ಬಳಿಕ ನನಗೆ ನೀವು ಮೊದಲಿನ ಕಾಳಜಿ, ಪ್ರೀತಿ ತೋರಿಸುತ್ತಿಲ್ಲ. ನಿಮ್ಮ ಆದ್ಯತೆಗಳು ಬದಲಾಗಿವೆ. ನಿಮಗೆ ಮನೆಯ ಮೇಲಿನ ಗಮನ ಕಡಿಮೆ ಆಗಿದೆ. ಹೊರಗೆ, ಹೊರಗಿನ ಜನರಿಗೆ ಪ್ರಾಮುಖ್ಯತೆ ಕೊಡುತ್ತಿದ್ದೀರಿ. ಅದಿಕ್ಕೇ ನೀವು ನನ್ನ ಅಮ್ಮನ ಮನೆಯಲ್ಲಿ ಬಿಟ್ಟು ಬಂದಿದ್ದು'

'ಹಾಗೇನೂ ಇಲ್ಲ ನಿವಿ. ನಿನಗೆ ಏನೇನೋ ಭ್ರಮೆ ಅಷ್ಟೇ. ನೀನು ರೆಸ್ಟ್ ತಗೋ. ಆಮೇಲೆ ಮಾತನಾಡೋಣ' ಎಂದು ಅವಳನ್ನು ಅಲ್ಲೇ ಒಂಟಿಯಾಗಿ ಬಿಟ್ಟು ಮಗಳೊಂದಿಗೆ ಹೊರ ನಡೆದ.

'ಇವಳ ಮನದಲ್ಲಿ ಏನೇನೋ ಅನುಮಾನಗಳು ಹುತ್ತಗಟ್ಟಿವೆ.. ಅವಳು ಊಹಿಸಿದಂತೆ ತಾನು ಮಗಳು ಬಂದ ಬಳಿಕ ಅವಳನ್ನು ಅಲಕ್ಷ್ಯ ಮಾಡುತ್ತಿದ್ದೇನೆಂಬ ಕಾರಣಕ್ಕೇ ಮಗಳ ಮೇಲೆ ಹೆತ್ತ ತಾಯಿಯೇ ಈ ರೀತಿಯ ಕೃತ್ಯ ಎಸಗಬಹುದೇ.. ಇದಂತೂ ತೀರಾ ಹೀನಾಯ ಘಟನೆ.. ಆದರೆ ನಿವಿ ಮೇಲ್ನೋಟಕ್ಕೆ ಅಷ್ಟು ಸಣ್ಣ ಮನಸ್ಸಿನವಳಂತೆ ಕಾಣುವುದಿಲ್ಲ.. ವಿದ್ಯಾವಂತೆ.. ಸುಸಂಸ್ಕೃತಳಾಗಿ ಇಷ್ಟು ಸಣ್ಣ ಭಾವನೆಯನ್ನು ತನ್ನ ಮನದಲ್ಲಿ ಪೋಷಿಸಿಕೊಳ್ಳಲು ಹೇಗೆ ಸಾಧ್ಯ..? ತನಗೆ ಕೆಲಸದ ಒತ್ತಡ ಅಧಿಕವಾಗಿ ಮನೆಯ ಕಡೆಗೆ ಹೆಚ್ಚು ಗಮನ ಕೇಂದ್ರೀಕರಿಸಲು ಕಷ್ಟವಾಗುತ್ತಿದೆ ನಿಜವೇ ಆದರೂ, ಅದನ್ನು ನಿವಿ ಏಕೆ ಅರ್ಥ ಮಾಡಿಕೊಳ್ಳುತ್ತಿಲ್ಲ.. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಸ್ವಂತ ಕಾಲ ಮೇಲೆ ನಿಲ್ಲಲು, ಒಂದು ವಹಿವಾಟನ್ನು ಯಶಸ್ವಿಯಾಗಿ ಸ್ಥಾಪಿಸಿಕೊಳ್ಳಲು, ಗ್ರಾಹಕರ ನಂಬಿಕೆ ಗಳಿಸಿಕೊಳ್ಳಲು, ಉಳಿಸಿಕೊಳ್ಳಲು ಎಷ್ಟೊಂದು ಶ್ರಮಿಸಬೇಕಾದ ಅಗತ್ಯವಿದೆಯೆಂದು ಅದರಲ್ಲಿ ತೊಡಗಿಸಿಕೊಳ್ಳುವವರಿಗೆ ಮಾತ್ರ ಗೊತ್ತು..!'

(ಸಶೇಷ)